ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮಾ.

ತಾರೀಖು 4—5ನೇ ಮೇ 1903, ಉದಕಮಂಡಲ.

ಕ್ಯಾಂಪ್ ನಂ. 25—151, ಸ್ ೧೯೦೩ನೇ ಏಪ್ರಿಲ್ 27ನೇ ತಾರೀಖಿನಾವಜ್ಞೆ ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖೆ (ಲೋಕಲ್) ಇಂಜನಿಯರ್ ಸಬ್ಬಂದಿಯಲ್ಲಿ ಇದರಡೀ ಕಂಡ ವಾಪಸು ಬರೋಣಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

ನಂಬರು.	ಹೆಸರು.	ಹಾಲಿ ಕ್ಲಾಸು.	ವಾಪಸು ಮಾಡಲ್ಪಟ್ಟ ಕ್ಲಾಸು.	ವಾಪಸು ಬರೋಣದರ ಸ್ವಭಾವ.	ಷರಾ.
1	ಮೆ|| ವಿ. ಅಯ್ಯಾಸ್ವಾಮಿ ಅಯ್ಯರ್ ಯವರು.	ಸಬ್ ಪ್ರೋಟೆಂ ಮೊದಲನೇ ಕ್ಲಾಸಿನ ಅಸಿಸ್ಟೆಂಟ್ ಇಂಜಿನಿಯರ್	ಎರಡನೇ ಕ್ಲಾಸಿನ ಅಸಿಸ್ಟೆಂಟ್ ಇಂಜಿನಿಯರ್	ಹಾಯಂ	ಮೆ|| ಎಚ್. ಜೆ. ಮೊಲ್ಲಾಯಿಯವರು ರಜಾ ಬಿಂದ ವಾಪಸು ಬಂದ ನಂತರ
2	,, ಜೆ. ಪಾಸ್ಕಾಲ್ ಬೈದಂಗರ್ಫಿಯವರು.	ಸಬ್ ಪ್ರೋಟೆಂ ಎರಡನೇ ಕ್ಲಾಸಿನ ಅಸಿಸ್ಟೆಂಟ್ ಇಂಜಿನಿಯರ್	ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜಿನಿಯರ್	ಡಿಟೋ	
3	,, ಕೊಂಗೆತ್ತಿ ಪೊನ್ನಪ್ಪನವರು.	ಸಬ್ ಪ್ರೋಟೆಂ ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜಿನಿಯರ್	ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜಿನಿಯರ್	ಡಿಟೋ	
4	,, ಟಿ. ಎಸ್. ರಾಘವಾಚಾರ್ಯ	ಸಬ್ ಪ್ರೋಟೆಂ ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜಿನಿಯರ್	ಎರಡನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜಿನಿಯರ್	ಡಿಟೋ	
5	,, ವೈ. ಅಶ್ವತ್ಥನಾರಾಯಣ ರಾಯರು.	ಸಬ್ ಪ್ರೋಟೆಂ ಎರಡನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜಿನಿಯರ್	ಮೂರನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜಿನಿಯರ್	ಡಿಟೋ	

ಹುಕುಂ ಬನೋಜೀಬ್,
ಡಬ್ಲ್ಯೂ. ಮೈಕ್ ಹಚೇಕ್,
ಪಬ್ಲಿಕ್ ವರ್ಕ್ಸ್ ಇಲಾಖೆ, ಮೈಸೂರ ಗವರ್ನ್ಮೆಂಟ್ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್ನಾಮಾ.

ತಾರೀಖು 5ನೇ ಮೇ 1903.

ನಂ. 2165, ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ಕಿಕ್ಕೇರಿ ಸುಬ್ಬರಾಯರ ಛತ್ರದ ಕೆಲಸಗಳನ್ನು ವೀಕ್ಷಿಚಾರಣೆ ಮಾಡುವ ಜಿಲ್ಲೆ ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟ ಮೆ|| ರಾ|| ರಾ|| ಸೀತಾರಾಮಯ್ಯನವರ ಮತ್ತು ಮೆ|| ರಾ|| ರಾ|| ತಮ್ಮಯ್ಯನವರ ಸೌಕರಿಯ ಅನಧಿಯು ಪೂರೈಸಿರುವದರಿಂದ ಇನ್ನೂ 5 ವರುಷಗಳ ಕಾಲದ ವರಿವಿಗೆ ಅವರುಗಳು ಪುನಃ ಮೊಕರರ್ರಾಡಲ್ಪಟ್ಟಿರುತ್ತಾರೆ. ಮತ್ತು ಮೆ|| ರಾ|| ರಾ|| ಕಿಕ್ಕೇರಿ ರಾಮಣ್ಣನವರು ಅದೇ ಕಾಲದ ವರಿವಿಗೆ ಮೇಲ್ಕಂಡ ಛತ್ರದ ಕುರಿತು ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 5ನೇ ಮೇ 1903.

ನಂ. 2169, ಇದರಡೀ ಕಂಡ ದೊಡ್ಡ ಮನುಷ್ಯರುಗಳು ಅರಸೀಕೆರೆ ತಾಲ್ಲೂಕು ಬೆಟ್ಟದಪುರದಲ್ಲಿರುವ ಶ್ರೀರಂಗನಾಥಸ್ವಾಮಿಯ ದೇವಸ್ಥಾನದ ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ :—

1. ಮೆ|| ರಾ|| ರಾ|| ಚಿಕ್ಕೂರು ಸುಬ್ಬರಾಯರು.
2. ,, ಚಿಕ್ಕೂರ ಪಟೇಲರಾದ ಗಂಗೇಗೌಡರವರು.
3. ,, ಕೆ. ನರಸಯ್ಯನವರು.
4. ,, ಹಿರಿಯೂರು ಶಾನಭೋಗರಾದ ಕೃಷ್ಣಪ್ಪನವರು.
5. ,, ಬೈರಾಂಬುದಿ ಪಟೇಲರಾದ ಬಸವೇಗೌಡರವರು.
6. ,, ಹಿರಿಯೂರು ನಂಜಂಣನವರು.

ಹುಕುಂ ಬನೋಜೀಬ್,
ಎಲ್. ಅನಂತಸ್ವಾಮಿರಾವ್,
ಮುಜರೈ ಇಲಾಖಾ ಡೆಪ್ಯುಟಿ ಸೆಕ್ರೆಟರಿ.